೩. ರಾಜ್ಯದಲ್ಲಿ ಗಂಡು ಮಕ್ಕಳ ರೀತಿ ಹೆಣ್ಣು ಮಕ್ಕಳಿಗೂ ಪಾಲುದಾರಿಕೆ ಹಕ್ಕು ಕೊಡುವ ಬಗ್ಗೆ.

ಶ್ರೀ ಎಂ. ವಿ. ವೆಂಕಟಪ್ಪ.—ಅಧ್ಯಕ್ಷರೇ, ಗಂಡು ಮಕ್ಕಳಿಗೆ ಪಾಲುದಾರಿಕೆ ಏನಿದೆ ಅದೇ ರೀತಿ ಹೆಣ್ಣುಮಕ್ಕಳಿಗೆ ಪಾಲುದಾರಿಕೆ ಹಕ್ಕು ಕೊಡಲು ಪಕ್ಕದ ಆಂಧ್ರದಲ್ಲಿ ಕಾನೂನು ಜಾರಿಗೆ ಬಂದಿದೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ತರುವುದಕ್ಕೆ ಏನಾದರೂ ಯೋಚನೆ ಇದೆಯೇ? ಇದ್ದರೆ ಯಾವಾಗ ತರುತ್ತಾರೆ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಮ್ಮ ವಿಚಾರ ನಡೆದಿದ್ದು ಅದು ಕೊನೇ ಹಂತದಲ್ಲಿದೆ. ಮುಂದೆ ತಿಳಿಸುತ್ತೇವೆ.

೪ ಕೆ.ಜಿ.ಎಫ್. ಜಿಲ್ಲಾ ಪೋಲೀಸ್ ಡಿ.ವೈ.ಎಸ್.ಪಿ. ನಂಜುಂಡಪ್ಪ ಇವರು ಮೇಲಿನ ಅಧಿಕಾರಿಗಳ ಆದೇಶವನ್ನು ದಿಕ್ಕರಿಸಿರುವ ಬಗ್ಗೆ

ಶ್ರೀ ಎಂ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ, ಕೆಜಿಎಫ್ ಜಿಲ್ಲಾ ಪೋಲೀಸ್ ಡಿವೈಎಸ್‌ಪಿ ನಂಜುಂಡಪ್ಪ ಇವರು ಎಸ್‌ಪಿಯವರು ರಜೆಯನ್ನು ಮಂಜೂರು ಮಾಡಲು ನಿರಾಕರಿಸಿದ್ದರೂ ಸಹ ಅವರ ಆದೇಶವನ್ನು ದಿಕ್ಕರಿಸಿ ಮಾರ್ಚ್ ೮ರಂದು ರಜೆಯ ಮೇಲೆ ಹೋಗಿದ್ದರು. ಈ ಬಗ್ಗೆ ವಿಚಾರಣೆ ನಡೆಸಲು ಕೇಂದ್ರ ವಲಯದ ಡಿಐಜಿ ಶ್ರೀ ಎಂ. ಡಿ. ಸಿಂಗ್‌ರವರನ್ನು ನೇಮಿಸಲಾಗಿತ್ತು. ಈ ಬಗ್ಗೆ ವಿಚಾರಣೆ ನಡೆಸಿದ ಡಿಐಜಿ ಎಂ. ಡಿ. ಸಿಂಗ್‌ರವರು ತಮ್ಮ ವರದಿಯನ್ನು ಆದೇ ತಿಂಗಳಿನಲ್ಲೇ ಸರ್ಕಾರಕ್ಕೆ ಸಲ್ಲಿಸಿದರು. ಈ ವರದಿಯ ಮೇಲೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ. ಹಿರಿಯ ಅಧಿಕಾರಿಗಳ ಆದೇಶವನ್ನು ನಿರ್ಲಕ್ಷಿಸಿದ ಈ ಡಿವೈಎಸ್‌ಪಿಯ ಮೇಲೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ಎಂಬ ಬಗ್ಗೆ ಸದನಕ್ಕೆ ವಿವರವಾದ ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಈ ವಿಷಯದ ಬಗ್ಗೆ ನನಗೆ ವರದಿ ಬಂದಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಸಧ್ಯದಲ್ಲೇ ಇದರ ಬಗ್ಗೆ ನಿರ್ಣಯ ತೆಗೆದು ಕೊಳ್ಳುತ್ತೇನೆ.

೫. ಬೈಲಹೊಂಗಲ ನಗರದ ನೀರಿನ ಬವಣೆಯನ್ನು ನಿವಾರಿಸಲು 20 ಕೊಳವೆ ಬಾವಿಗಳನ್ನು ತೋಡಲು ಒತ್ತಾಯ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರ ಜನಸಂಖ್ಯೆಯು ಈಗ ೪೫೦೦೦ ದಷ್ಟಾಗಿದ್ದು ಇಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಆಗಿರುತ್ತದೆ. ಊರ ಹೊರಗಿನ ಜನರಿಗೆ ಮೂರು ನಾಲ್ಕು ದಿನಗಳಿಗೊಮ್ಮೆ ಪುರಸಭೆಯವರು ನೀರು ಬಿಡುತ್ತಿರುವ ಕಾರಣ ಜವರಿಗೆ ತೊಂದರೆ ಆಗಿದೆ. ಈ ನೀರಿನ ತೊಂದರೆಯನ್ನು ಹೋಗಲಾಡಿಸಲು ಕೂಡಲೇ ೨೦ ಕೊಳವೆ ಬಾವಿಗಳನ್ನು ತೋಡಿಸಲು ಜಿಲ್ಲಾಧಿಕಾರಿಗಳು, ಬೆಳಗಾವಿ ಹಾಗೂ ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮಂಡಲಿ ಬೆಂಗಳೂರು, ಇವರಿಗೆ ಆದೇಶ ನೀಡಬೇಕು ಎಂದು ತಮ್ಮ ಮುಖಾಂತರ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಪೂರ್ಣ ಉತ್ತರ ತಯಾರಿಲ್ಲ. ತರಿಸಿ ನಾಳೆ ನಾಡಿದ್ದು ಕೊಡುತ್ತೇನೆ.

೬ ಮಂಡಲ ಪಂಚಾಯಿತಿಯ ನೌಕರರನ್ನು ಸ್ಥಳೀಯ ಸಂಸ್ಥೆಗಳ ನೌಕರರಂತೆ ಪರಿಗಣಿಸಿ ಸೌಲಭ್ಯಗಳನ್ನು ನೀಡಲಿಲ ಒತ್ತಾಯ.

ಶ್ರೀ ಪಿ. ಸಿ. ಸಿದ್ದನಗೌಡ.—ಅಧ್ಯಕ್ಷರೇ ರಾಜ್ಯಾದ್ಯಂತ ಮಂಡಲಪಂಚಾಯತ್ ವ್ಯಾಪ್ತಿಯಲ್ಲಿ ಅನೇಕ ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದು ಸದರಿ ನೌಕರರನ್ನು ಖಾಯಂ ಸರ್ಕಾರಿ ನೌಕರರೆಂದು ಪರಿಗಣಿಸಬೇಕಾಗಿಯೂ ಹಾಗೂ ಸ್ಥಳೀಯ ಸಂಸ್ಥೆಗಳ ಮತ್ತು ನಗರಸಭಾ ನೌಕರರ ಸೇವಾ ನಿಯಮದ ಪ್ರಕಾರ ಖಾಯಂಗೊಳಿಸಿ ಇವರಿಗೆ ಸಲ್ಲಿಸಬೇಕಾದ ಗ್ರಾಚ್ಯುಯಿಟಿ ತುಟ್ಟಿಭತ್ಯ ಹಾಗೂ ಸಿಗಬೇಕಾದ ಸೌಲಭ್ಯಗಳನ್ನು ಕೊಡಬೇಕಾಗಿಯೂ ಹಾಗೂ ಇವರು ೧೯-೩-೯೨ರಂದು ಬೆಂಗಳೂರು ವಿಧಾನಸೌಧದ ಎದುರು ಧರಣಿ ಸತ್ಯಾಗ್ರಹ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ? ಹೇಗೆ? ಬಂದಿದ್ದಲ್ಲಿ ಈ ನೌಕರರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ?